ಓ.ಎಸ್.120/21 ಪಿ.ಡಬ್ಲ್ಯೂ 1

ದಿನಾಂಕಃ **29.03.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರಿದ ಪಾಟೀಸವಾಲುಃ ಪ್ರತಿವಾದಿಪರ ವಕೀಲರಾದ ಶ್ರೀ ಕೆ ಸಿ ಬಿ ಅವರಿಂದ–**

3. ಪ್ರಸ್ತುತ ದಾವೆಯನ್ನು ನಾನು ಭಾಗಃಶ ಕೋರಿ ಸಲ್ಲಿಸಿರುತ್ತೇನೆ . ನನ್ನ ತಂದೆ ತೀರಿಹೋಗಿ 36 ವರ್ಷಗಳಾಗಿರುತ್ತವೆ. ಸಾಕ್ಷಿ ಮುಂದುವರಿದು ನನ್ನ ತಂದೆ ತೀರಿಹೋಗಿ ಎಷ್ಟು ವರ್ಷಗಳಾಗಿರುತ್ತವೆ ನನಗೆ ಗೊತ್ತಿಲ್ಲ. ನನ್ನ ತಂದೆಯವರಿಗೆ 4 ಜನ ಮಕ್ಕಳು 1. ಅನಿಲ್ ಕುಮಾರ ಅವರ ವಯಸ್ಸು ನನಗೆ ಗೊತ್ತಿಲ್ಲ. ವಾದಪತ್ರದಲ್ಲಿ ನನ್ನ ಅಣ್ಣ ಅನಿಲ್ ಕುಮಾರ ಅವರಿಗೆ 36 ವರ್ಷಗಳಾಗಿರುತ್ತವೆ ಎಂದು ತಿಳಿಸಿದ್ದು ಅದು ಸರಿಯೋ ತಪ್ಪೋ ನನಗೆ ಗೊತ್ತಿಲ್ಲ. 2. ರವಿ ಕುಮಾರ್ ಅವರ ವಯಸ್ಸು ನನಗೆ ಗೊತ್ತಿಲ್ಲ. 3. ನನ್ನ ಸಹೋದರಿ ರಮ್ಯ ಅವರಿಗೆ ಅವರ ವಯಸ್ಸು ನನಗೆ ಗೊತ್ತಿಲ್ಲ.

4. ನನ್ನ ವಾದಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ ನಾನು 5 ನೇ ತರಗತಿ ಓದಿದ್ದೇನೆ. ವಾದಪತ್ರವನ್ನು ಕನ್ನಡ ಭಾಷೆಯಲ್ಲಿ ಸಲ್ಲಿಸಲಾಗಿದೆ ನನ್ನ ಮದುವೆ ಆಗಿ 23 ವರ್ಷಗಳಾಗಿರುತ್ತವೆ. ನನ್ನ ಮದುವೆ ಆದಾಗ ನಾನು ವಯಸ್ಕಳಾಗಿರಲಿಲ್ಲ. ನನ್ನ ಮದುವೆ 2001 ರಲ್ಲಿ ಆಗಿರುತ್ತದೆ. 2011 ರಲ್ಲಿ ನನ್ನ ಮದುವೆ ಆಗಿದೆ ಎಂದು ತೋರಿಸಲು ಲಗ್ನ ಪತ್ರಿಕೆ ಇದೆ.

5. ನನ್ನ ತಂಗಿ ರಮ್ಯ ಅವರ ಮದುವೆ ಆಗಿದೆ. ಯಾವ ವರ್ಷ ಆಗಿದೆ ನನಗೆ ನೆನಪಿಲ್ಲ. ನನ್ನ ಜನ್ಮ ದಿನಾಂಕ ನನಗೆ ಗೊತ್ತಿಲ್ಲ. ನಾನು ಚಲ್ಲಹಳ್ಳಿ ಸರಕಾರಿ ಶಾಲೆಯಲ್ಲಿ ಓದಿರುತ್ತೇನೆ. ಈ ಬಗ್ಗೆ ಶಾಲಾ ದಾಖಲಾತಿಗಳನ್ನು ಹಾಜರುಪಡಿಸಲು ತೊಂದರೆ ಇದೆಯಾ ಎಂಬ ಪ್ರಶ್ನೆಗೆ ಅಲ್ಲಿ ನನಗೆ ಹೋಗಲು ಆಗುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಮದುವೆ ಆಗಿ ಮೈಸೂರಿನಲ್ಲಿ ವಾಸವಾಗಿದ್ದೇನೆ. ನಾನು ತವರಿಗೆ ಹೋಗದೆ 7–8 ವರ್ಷಗಳಾಗಿವೆ. ಆಸ್ತಿ ವಿಚಾರವಾಗಿ ಗಲಾಟೆ ಆಗಿದ್ದರಿಂದ ನಾನು ಮತ್ತು ನನ್ನ ತಂಗಿ ತವರಿಗೆ ಹೋಗುವುದಿಲ್ಲ. ಸದರಿ ಗಲಾಟೆ ಆಗಿ7–8 ವರ್ಷಗಳಾಗಿವೆ. ನನ್ನ ಸಹೋದರಿ ಜನ್ಮ ದಿನಾಂಕ ನನಗೆ ಗೊತ್ತಿಲ್ಲ.

6. ದಾವಾ ಆಸ್ತಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ನಾನು ಮತ್ತು ನನ್ನ ತಂಗಿ ಓಡಾಡಿ ಪಡೆದಿರುತ್ತೇವೆ. ನನಗೆ ಸರ್ವೇ ನಂ. ಗೊತ್ತಿಲ್ಲ. ನಾನು ದಾವೆ ಸಲ್ಲಿಸಿರುವ ಮನೆ ನಂಬರ್ ನನಗೆ ಗೊತ್ತಿಲ್ಲ. ಎಷ್ಟು ಆಸ್ತಿಗಳ ಮೇಲೆ ಸಲ್ಲಿಸಿರುತ್ತೇನೆ ನನಗೆ ಗೊತ್ತಿಲ್ಲ. ದಾವೆ ಸಲ್ಲಿಸಲು ನನಗೆ ಯಾರು ಹೇಳಿಕೊಟ್ಟಿಲ್ಲ ನಾನೆ ಸಲ್ಲಿಸಿರುತ್ತೇನೆ. ದಾವಾ ಆಸ್ತಿಗಳ ಚೆಕ್ಕುಬಂದಿಯನ್ನು ನನ್ನ ಸಹೋದರಿ ಹೇಳಿ ಬರೆಯಿಸಿರುತ್ತಾರೆ. ಅವಳು ಸಹ 5 ನೇ ತರಗತಿ ಓದಿದ್ದಾಳೆ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಹಕ್ಕು ಖುಲಾಸೆ ಪತ್ರದ ಜೆರಾಕ್ಸ್ ಪ್ರತಿಯನ್ನು ಸಾಕ್ಷಿದಾರರಿಗೆ ತೋರಿಸಿ ಕನ್ಫ್ರಂಟ್ ಮಾಡುವ ಸಮಯದಲ್ಲಿ ಅದು ಜೆರಾಕ್ಸ್ ಪ್ರತಿಯಾದ್ದರಿಂದ ಅದನ್ನು ಕನ್ಫ್ರಂಟ್ ಮಾಡಲು ಬರುವುದಿಲ್ಲ ಎಂದು ನ್ಯಾಯಾಲಯ ಸೂಚಿಸಿದ್ದಕ್ಕೆ ಪ್ರತಿವಾದಿ ಪರ ವಕೀಲರು ಈ ಸಂಬಂಧ ಸೈಟೇಷನ್ ನೀಡಿ ಪಾಟೀಸವಾಲು ಮುಂದುವರಿಸಲು ಕೋರಿದ್ದಕ್ಕೆ ಅನುಮತಿ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.